1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ
ಓ ಎಸ್ ನಂ. 159/2018

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿನಾಂಕಃ 27-09-2024 ಪಿ .ಡಬ್ಲ್ಯೂ 1

**ಪಾಟೀ ಸವಾಲುಃ 2 ರಿಂದ 4 ನೇ ಪ್ರತಿವಾದಿ ಪರ ಶ್ರೀ ಪಿ ಕೆ ಎಸ್ ವಕೀಲರಿಂದಃ**

ನಾನು ಐಟಿಐ ಓದಿದ್ದೇನೆ. ನಾನು ವಿಜಯನಗರ ಶುಗರ್ ಫ್ಯಾಕ್ಟರಿಯಲ್ಲಿ ಇನ್ಸುಮೆಂಟ ಟೆಕ್ನನಿಷಿಯನ್ ಆಗಿ ಕೆಲಸ ಮಾಡುತ್ತೇನೆ. ನಾನು ಶ್ರೀನಿವಾಸ ರಾವ್ ತಂದೆ ದಿವಂಗತ ಶಂಕರನಾರಾಯಣ ರಾವ್ ರವರಿಗೆ ಸಾಲ ಕೊಟ್ಟಿದ್ದೇನೆ. ಸದರಿ ಶಂಕರ ನಾರಾಯಣ ರಾವ್ ತೀರಿಕೊಂಡ ಬಗ್ಗೆ ಅವರ ಮರಣ ಪ್ರಮಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಶಂಕರ ನಾರಾಯಣ ರಾವ್ ರವರ ವಾರಸುದಾರರು ಯಾರು ಎಂದು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ಶಂಕರ ನಾರಾಯಣ ರಾವ್ ರವರ ಮರಣಾ ನಂತರ ಪ್ರತಿವಾದಿಗಳಿಗೆ ಅವರ ಆಸ್ತಿಯನ್ನು ಪಡೆದಿದ್ದಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಶ್ರೀನಿವಾಸ ರಾವ್ ಮತ್ತು ಅವರ ಅಣ್ಣ ತಮ್ಮಂದಿರು ರವರು ಮತ್ತು ಪ್ರತಿವಾದಿಯರು ಜಮೀನನ್ನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿಯವರು ಅವರ ಜಮೀನನ್ನು ಈ ದಾವೆ ಸಲ್ಲಿಸಿದ ನಂತರದಲ್ಲಿ ಮಾರಾಟ ಮಾಡಿರುತ್ತಾರೆ. ಶ್ರೀನಿವಾಸ ರಾವ್ ರವರ ಹೆಸರಿಗೆ ಎಷ್ಟು ಜಮೀನು ಇತ್ತು ಎಂದು ತೋರಿಸಲು ದಾಖಲಾತಿಗಳನ್ನು ಸಲ್ಲಿಸಿದ್ದೇನೆ. ಸಾಕ್ಷಿಯು ದಾಖಲಾತಿಗಳನ್ನು ನೋಡಿ ಪಹಣಿಯನ್ನು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಪಹಣಿಯಲ್ಲಿರುವ ಶ್ರೀನಿವಾಸ ರಾವ ಹೆಸರು ಇಲ್ಲ ಎಂದರೆ ಸಾಕ್ಷಿಯು ಅವರ ತಂದೆ ಹೆಸರಿಗೆ ಇದೆ ಎಂದು ನುಡಿಯುತ್ತಾರೆ. ಶ್ರೀನಿವಾಸ ರಾವ ರವರು ತಮ್ಮ ಆಸ್ತಿಯನ್ನು ಮಾರಿದ ವಿಚಾರ ನನಗೆ ಪಹಣಿಯಲ್ಲಿ ಹೆಸರು ಬದಲಾದಾಗ ತಿಳಿದಿರುತ್ತದೆ. ಜಮೀನು ಈ ದಾವೆಯನ್ನು ಸಲ್ಲಿಸಿದ ನಂತರ ಮಾರಾಟ ಮಾಡಿರುತ್ತೇನೆ. ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ನಿಪಿ.1 ಕ್ಕೆ 2 ರಿಂದ 4 ನೇ ಪ್ರತಿವಾದಿಯರು ಸಹಿ ಮಾಡಿಲ್ಲ ಎಂದರೆ ಸರಿ.

ಶ್ರೀನಿವಾಸ ರಾವ್ ತಂದೆ ದಿವಂಗತ ಶಂಕರನಾರಾಯಣ ರಾವ್ ರವರ ತಂದೆ ಹಾಗೂ ತಾಯಿ ತೀಕರಿಕೊಂಡಿದ್ದಾರೆ. ಯಾವಾಗ ತೀಕರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮೃತ ಶ್ರೀನಿವಾಸ ರಾವ್ ರವರ ಹೆಂಡತಿ ಮಾಲತಿ 1 ನೇ ಪ್ರತಿವಾದಿ. ನಿಪ.12 ರಲ್ಲಿರುವ ಆಸ್ತಿ ಶಂಕರನಾರಾಯಣ ರಾವ್ ತಂದೆ ಹನುಮಂತಪ್ಪ ರವರ ಆಸ್ತಿ ಎಂದರೆ ಸರಿ. ಶಂಕರನಾರಾಯಣ ರಾವ್ ರವರು ಶ್ರೀನಿವಾಸ ರಾವ್ ತಂದೆ ಎಂದರೆ ಸರಿ. ಶಂಕರನಾರಾಯಣ ರಾವ್ ರವರಿಗೆ ಎಷ್ಟು ಜನ ಹೆಣ್ಣು ಮಕ್ಕಳು ಎಂದು ನನಗೆ ಗೊತ್ತಿಲ್ಲ. ನಿಪಿ.12 ರಲ್ಲಿರುವ ಆಸ್ತಿ ಸಂಪೂರ್ಣ ವಾಗಿ ಶಂಕರನಾರಾಯಣ ರಾವ್ ರವರದ್ದಲ್ಲ ಎಂದರೆ ಸರಿ. ಶಂಕರನಾರಾಯಣ ರಾವ್ ರಿಂದ 2 ರಿಂದ 4 ನೇ ಪ್ರತಿವಾದಿ ಯವರಿಗೆ ಯಾವುದೇ ಆಸ್ತಿ ಬಂದಿಲ್ಲ ಎಂದರೆ ಸರಿಯಲ್ಲ. ನಿಪಿ.2 ಕ್ಕೂ 2 ರಿಂದ 4 ಪ್ರತಿವಾದಿಗೂ ಯಾವುದೇ ರೀತಿ ಸಂಬಂಧ ಇಲ್ಲ

ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಗಳು ಮೃತ ಶ್ರೀನಿವಾಸ ರಾವ್ ತಂದೆ ಶಂಕರನಾರಾಯಣ ರಾವ್ ರವರ ವಾರಸುದಾರರು ಅಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಹೆಂಡತಿ ಮಾತ್ರ ವಾರಸುದಾರರು ಎಂದು ನುಡಿಯುತ್ತಾರೆ. 2 ರಿಂದ 4 ನೇ ಪ್ರತಿವಾದಿಯರು ಹಣ ನೀಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಿಪಿ.2 ರಲ್ಲಿರುವ ಸಹಿ ಶ್ರೀನಿವಾಸ ರಾವ ರವರ ಸಹಿ ಅಲ್ಲ ಎಂದರೆ ಸರಿ. ನಿಪಿ.2 ರೊಂದಿಗೆ ಹಣ ಸಂದಾಯ ರಶೀದಿ ಇಲ್ಲ ಎಂದರೆ ಸರಿ. 2 ರಿಂದ 4 ನೇ ಪ್ರತಿವಾದಿಗಳು ಮೃತ ಶ್ರೀನಿವಾಸರಾವ್ ರವರಿಗೂ ಸಂಬಂದ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶ್ರೀನಿವಾಸರಾವ್ ರವರಿಗೆ ನಾನು ಹಣ ನೀಡಿಲ್ಲ ಸುಳ್ಳು ಆಪಾದನೆ ಮಾಡಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ನ್ನು ವೆಂಕಟಗಿರಿ ಎನ್ನುವವರು ಬರೆದಿರುತ್ತಾರೆ. ಸದರಿಯವರು ಈಗ ಶಿಗ್ಗಾಂವನಲ್ಲಿ ಇದ್ದಾರೆ. ಸದರಿಯವರನ್ನು ಸಾಕ್ಷಿಯನ್ನಾಗಿ ಮಾಡಲು ನಿಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅವರು ದೂರ ಇದ್ದಾರೆ ಎಂದು ನುಡಿಯುತ್ತಾರೆ. ಸತ್ಯ ಹೊರಬರುತ್ತದೆ ಎಂದು ಸಾಕ್ಷಿಯನ್ನಾಗಿ ಮಾಡಿಲ್ಲ  ಎಂದರೆ ಸಾಕ್ಷಿಯು ಅವರನ್ನು ಕೇಳಿ ನೋಡಬೆಕು ಎಂದು ನುಡಿಯುತ್ತಾರೆ. 2 ರಿಂದ 4 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ನ್ನು ಬರೆದುಕೊಡುವ ಸಂದರ್ಭದಲ್ಲಿ ನನ್ನ ಬಳಿ 3 ಲಕ್ಷ ರೂ ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ  ಎಂದರೆ ಸರಿ. ನನ್ನ ಬಳಿ ಚೀಟಿ ಹಾಗೂ ನನ್ನ ಸಹೋದರಿಯ ಹಣ ಇತ್ತು ಅದನ್ನೇ ನೀಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಆದಾಯದ ನನ್ನ ಪಾಸ್ ಬುಕ್ ನಮೂದು ಇರುತ್ತದೆ ಎಂದರೆ ಸರಿ. ಸದರಿ ಪಾಸ ಬುಕ್ ನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಚೀಟಿಯ ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ 2 ಮಕ್ಕಳು ನನಗೆ ತಿಂಗಳಿಗೆ 30 ಸಾವಿರ ಆದಾಯ ಬರುತ್ತದೆ. 2017 ರಲ್ಲಿ ನನಗೆ ತಿಂಗಳಿಗೆ 24,000 ರೂ ಆದಾಯ ಇತ್ತು. ನಾನು ಆಗ ಮುಂಡರಗಿಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಕ್ವಾಟ್ರಸ್ ನಲ್ಲಿ ಇದ್ದೆನು. ಇಲ್ಲಿ ಸ್ವಂತ ಮನೆ ಇದೆ. ನಿಪಿ.1 ನ್ನು ಮಾಡಿದ ದಿನಾಂಕದಂದು ನಾನು ನನ್ನ ಕಚೇರಿಗೆ ಹಾಜರಿರದೇ ಇರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ನನಗೆ 3 ಲಕ್ಷ ರೂ ಸಾಲವನ್ನು ನೀಡುವ ಕ್ಷಮತೆ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ